शिक्षा मंत्रालय
MINISTRY OF **EDUCATION**

सत्यमेव जयते

कौशल विकास और उद्यमशीलता मंत्रालय
Ministry of **Skill Development And Entrepreneurship**

सत्यमेव जयते

# ತಂತ್ರಜ್ಞಾನ ಮತ್ತು ಭಾರತೀಯ ಭಾಷಾ ಶೃಂಗಸಭೆ

## 30 ಸೆಪ್ಟೆಂಬರ್ ಮತ್ತು 1 ಅಕ್ಟೋಬರ್ 2023

**ಸ್ಥಳ: ಡಾ. ಅಂಬೇಡ್ಕರ್ ಇಂಟರ್‌ನ್ಯಾಷನಲ್ ಸೆಂಟರ್, ಜನಪಥ್, ನವದೆಹಲಿ**

https://technology-bharatiyabhasha.aicte-india.org/

### ತಂತ್ರಜ್ಞಾನ ಮತ್ತು ಭಾರತೀಯ ಭಾಷಾ ಶೃಂಗಸಭೆಯ ಬಗ್ಗೆ

ತಂತ್ರಜ್ಞಾನ ಮತ್ತು ಭಾರತೀಯ ಭಾಷಾ ಶೃಂಗಸಭೆಯು "ಭಾರತೀಯ ಭಾಷೆಗಳಿಗೆ ತಂತ್ರಜ್ಞಾನ, ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನ ಮತ್ತು ಭಾರತೀಯ ಭಾಷೆಗಳ ಮೂಲಕ ತಂತ್ರಜ್ಞಾನ" ಎಂಬ ಚರ್ಚಾಸ್ಪದವಾಗಿರುವ ಮೂರು ಪ್ರಮುಖ ವಿಷಯಗಳನ್ನು ಒಳಗೊಂಡಿದೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಮಾರ್ಗದರ್ಶನದಡಿಯಲ್ಲಿ, ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ(ಸಿ.ಐ.ಐ.ಎಲ್.)ವು, ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ಎ.ಐ.ಸಿ.ಟಿ.ಈ.), ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ (ಎನ್.ಇ.ಟಿ.ಎಫ್.), ಭಾರತೀಯ ಭಾಷಾ ಸಮಿತಿ (ಬಿ.ಬಿ.ಎಸ್.), ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿ (ಎನ್.ಸಿ.ಈ.ಆರ್.ಟಿ.), ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕೇಂದ್ರ (ಎನ್.ಸಿ.ವಿ.ಈ.ಟಿ.) ಮತ್ತು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪರಿಷತ್ತು (ಎನ್.ಸಿ.ಟಿ.ಈ.) ಇವರುಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ದಿನಾಂಕ 30 ಸೆಪ್ಟೆಂಬರ್ ಮತ್ತು 1 ಅಕ್ಟೋಬರ್ 2023 ರಂದು ಡಾ. ಅಂಬೇಡ್ಕರ್ ಇಂಟರ್‌ನ್ಯಾಷನಲ್ ಸೆಂಟರ್, ಜನಪಥ್, ನವದೆಹಲಿಯಲ್ಲಿ ನಡೆಯಲಿದೆ. ಈ ಶೃಂಗಸಭೆಯು ಶಿಕ್ಷಣ ಮತ್ತು ತಂತ್ರಜ್ಞಾನ ಕ್ಷೇತ್ರದ ಎಲ್ಲಾ ಪಾಲುದಾರರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಗುರಿ ಹೊಂದಿದ್ದು ಭಾರತೀಯ ಭಾಷೆಗಳನ್ನು ಬಳಸಲಾಗುವ ಎಲ್ಲಾ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ರಾಷ್ಟ್ರೀಯ ಶಿಕ್ಷಣ ನೀತಿ–2020ರ ಗುರಿಗಳನ್ನು ಸಾಧಿಸುವ ಮಾರ್ಗಗಳ ಕುರಿತು ಇಲ್ಲಿ ಚರ್ಚೆಗಳು ನಡೆಯಲಿವೆ.



ನವದೆಹಲಿಯಲ್ಲಿ ಎರಡು ದಿನಗಳ ಅವಧಿಗೆ ನಡೆಯುವ ಈ ಶೃಂಗಸಭೆಯಲ್ಲಿ 1000 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಈ ಕಾರ್ಯಕ್ರಮವು ಪ್ರಸ್ತುತಿಗಳು, ಪ್ಯಾನಲ್ ಚರ್ಚೆಗಳು, ಪ್ರದರ್ಶನಗಳು ಮತ್ತು ನೆಟ್‌ವರ್ಕಿಂಗ್ ಅವಕಾಶಗಳನ್ನು ಒಳಗೊಂಡಿರುತ್ತದೆ. ಭಾರತೀಯ **ಭಾಷೆಗಳಿಗಾಗಿ, ಭಾರತೀಯ ಭಾಷೆಗಳಲ್ಲಿ ಮತ್ತು ಭಾರತೀಯ ಭಾಷೆಗಳ ಮೂಲಕ** ತಂತ್ರಜ್ಞಾನ ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಪರಿಣಿತರು ಮತ್ತು ಸಂಸ್ಥೆಗಳು, ಏ.ಐ. (ಕೃತಕ ಬುದ್ಧಿಮತ್ತೆ) ಮತ್ತು ಎಮ್.ಎಲ್. (ಮೆಷಿನ್ ಲರ್ನಿಂಗ್) ಸಂಶೋಧಕರು, ಎಜು–ಟೆಕ್ ಕಂಪನಿಗಳು, ಸ್ಟಾರ್ಟ್–ಅಪ್‌ಗಳು, ಮುಂತಾದ ತಂತ್ರಜ್ಞಾನದ ಬಳಕೆದಾರರು ಮತ್ತು ನೀತಿ ನಿರೂಪಕರು ಈ ಶೃಂಗಸಭೆಯಲ್ಲಿ ಭಾಗವಹಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರ ನಡುವೆ ವಿಚಾರ ವಿನಿಮಯ ಮತ್ತು ಸಹಯೋಗ ಏರ್ಪಡುವುದರಿಂದ, ಇದು ಭಾರತ ಮತ್ತು ಪ್ರಪಂಚದಾದ್ಯಂತ ಭಾಷಾ ತಂತ್ರಜ್ಞಾನ, ಸಂಶೋಧನೆ ಮತ್ತು ನಾವೀನ್ಯತೆಗಳ ಪ್ರಗತಿಯನ್ನು ಉತ್ತೇಜಿಸುತ್ತದೆ.

## ಶೃಂಗಸಭೆಯ ವಿಷಯವಸ್ತು

ಎನ್.ಇ.ಪಿ.–2020 ಶೈಕ್ಷಣಿಕ ಅವಕಾಶಗಳಿಗೆ ಪ್ರವೇಶ ಸಾಧ್ಯತೆಯನ್ನು ಹೆಚ್ಚಿಸಲು ತಂತ್ರಜ್ಞಾನದ ಬಳಕೆ, ಒಳಗೊಳ್ಳುವಿಕೆ ಮತ್ತು ವೈವಿಧ್ಯತೆಯ ಕಾಳಜಿಗಳನ್ನು ಪರಿಹರಿಸುವತ್ತ ಹೆಚ್ಚಿನ ಒತ್ತು ನೀಡುತ್ತದೆ ಮತ್ತು ದೇಶದಲ್ಲಿ ಶೈಕ್ಷಣಿಕ ವ್ಯವಸ್ಥೆಯ ಪ್ರವೇಶ, ಗುಣಮಟ್ಟ, ಸಮತೆ, ಕೈಗೆಟುಕುವಿಕೆ ಮತ್ತು ಹೊಣೆಗಾರಿಕೆಯನ್ನು ಸುಧಾರಿಸುತ್ತದೆ.


ಶೃಂಗಸಭೆಯು ಪ್ರಸ್ತುತ ಭಾಷಾ ಪರಿಸರ ವ್ಯವಸ್ಥೆಯಿಂದ, ಭಾರತೀಯ ಭಾಷಾ ಪರಿಸರ ವ್ಯವಸ್ಥೆಗೆ ಸುಗಮ ಪರಿವರ್ತನೆಗಾಗಿ, ತಂತ್ರಜ್ಞಾನವನ್ನು ಬಳಸಿಕೊಳ್ಳುವ ಗುರಿಯನ್ನು ಹೊಂದಿದೆ. ಭಾಷೆ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, ಮೂರು ಪ್ರಮುಖ ಕ್ಷೇತ್ರಗಳಿಗೆ ಒತ್ತು ನೀಡಲಾಗಿದೆ:

- ಭಾರತೀಯ **ಭಾಷೆಗಳಿಗಾಗಿ** ತಂತ್ರಜ್ಞಾನ
- ಭಾರತೀಯ **ಭಾಷೆಗಳಲ್ಲಿ** ತಂತ್ರಜ್ಞಾನ
- ಭಾರತೀಯ **ಭಾಷೆಗಳ ಮೂಲಕ** ತಂತ್ರಜ್ಞಾನ

## ಭಾರತೀಯ ಭಾಷೆಗಳಿಗಾಗಿ ತಂತ್ರಜ್ಞಾನ

ವಿಷಯವಸ್ತುವಿನ ಈ ಅಂಶವು ಬೋಧನೆ, ಪರೀಕ್ಷೆ, ತರಬೇತಿ ಮತ್ತು ಅನುವಾದ ಕ್ಷೇತ್ರಗಳಲ್ಲಿ ಭಾರತೀಯ ಭಾಷೆಗಳಿಗೆ ತಂತ್ರಜ್ಞಾನದ ಬಳಕೆ ಮಾಡಬೇಕೆಂಬ ಉದ್ದೇಶವನ್ನು ಹೊಂದಿದೆ. ಬೋಧನೆಯು ಆನ್‌ಲೈನ್ ಮತ್ತು ಆಫ್‌ಲೈನ್ ವಿಧಾನಗಳ ಮೂಲಕ ಭಾರತೀಯ ಭಾಷೆಗಳ ಕಲಿಕೆ ಮತ್ತು ಬೋಧನೆ, ಕಲಿಕೆ–ಬೋಧನಾ ಸಾಮಗ್ರಿ, ಬೋಧನಾಶಾಸ್ತ್ರದ ಅಭಿವೃದ್ಧಿ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಪರೀಕ್ಷೆಯು ಭಾರತೀಯ ಭಾಷೆಗಳಲ್ಲಿ ಭಾಷಾ ಪ್ರಾವೀಣ್ಯತೆಯ ವಿವಿಧ ಹಂತಗಳ ಪರೀಕ್ಷಾ ವಿಧಾನಗಳು ಮತ್ತು ಪರೀಕ್ಷೆಗಳನ್ನು ಒಳಗೊಂಡಿರಲಿದೆ. ತರಬೇತಿಯು ಸೇವಾಪೂರ್ವ ಮತ್ತು ಸೇವೆಯಲ್ಲಿರುವ ಭಾಷಾ ಮತ್ತು ವಿಷಯ ಶಿಕ್ಷಕರು, ಮುಖ್ಯ ತರಬೇತುದಾರರು, ಭಾರತೀಯ ಭಾಷೆಗಳಲ್ಲಿ ಪಠ್ಯಪುಸ್ತಕ ರಚಿಸುವವರು ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಭಾಷಾ ಮೌಲ್ಯನಿರ್ಣಯ ಮತ್ತು ಮೌಲ್ಯಮಾಪನದಲ್ಲಿ ತೊಡಗಿರುವ ಪರೀಕ್ಷಕರು ಮತ್ತು ತಜ್ಞರಿಗೆ ತರಬೇತಿ ನೀಡುವಿಕೆಯನ್ನು ಒಳಗೊಂಡಿರುತ್ತದೆ.

ಅನುವಾದವು ಭಾರತೀಯ ಭಾಷೆಗಳಿಗೆ ಭಾಷಾ ಅನುವಾದ ಪರಿಕರಗಳನ್ನು ಅಭಿವೃದ್ಧಿಪಡಿಸುವ ಮತ್ತು ನವೀಕರಿಸುವ ಮತ್ತು ಭಾರತೀಯ ಭಾಷೆಗಳಲ್ಲಿ ತರಬೇತಿ ಪಡೆದ ಅನುವಾದಕರ ಬೃಹತ್ ಸಂಗ್ರಹವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಇದು ಅನುವಾದಕ್ಕೆ ತಂತ್ರಜ್ಞಾನದ ಅಗತ್ಯತೆಯನ್ನು, ಭಾರತೀಯ ಭಾಷೆಗಳಲ್ಲಿ ಡಿಜಿಟಲ್ ಅನುವಾದ ಕೈಪಿಡಿಗಳು ಮತ್ತು ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸುವುದು, ತಂತ್ರಜ್ಞಾನವನ್ನು ಬಳಸುವುದು ಇತ್ಯಾದಿಗಳನ್ನು ನಿರ್ಣಯಿಸುತ್ತದೆ.



## ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನ

ಭಾರತೀಯ ಭಾಷೆಗಳಲ್ಲಿ ಯಂತ್ರಾಂಶ (ಹಾರ್ಡ್‌ವೇರ್) ಮತ್ತು ತಂತ್ರಾಂಶ (ಸಾಫ್ಟ್‌ವೇರ್) ಪರಿಕರಗಳನ್ನು ಅಭಿವೃದ್ಧಿಪಡಿಸುವ ಮೂಲಕ ದೇಶದಲ್ಲಿ ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಕ್ರಾಂತಿಯನ್ನು ಮಾಡಬೇಕಾಗಿದೆ. ಅಂದರೆ, ಭಾರತೀಯ ಭಾಷೆಗಳಲ್ಲಿ ಭಾರತೀಯ ಆಪರೇಟಿಂಗ್ ಸಿಸ್ಟಮ್ಸ್(ಓ.ಎಸ್.) ಮತ್ತು ಮಷೀನ್ ಲರ್ನಿಂಗ್(ಎಮ್.ಎಲ್.)ಗಳ ರಚನೆ, ಕೋಡ್‌ಗಳು ಮತ್ತು ಪ್ರೋಗ್ರಾಮ್ ಬರೆಯುವಲ್ಲಿ ಭಾರತೀಯ ಭಾಷೆಗಳ ಬಳಕೆ, ಸಾರ್ವತ್ರಿಕ ಸ್ವೀಕಾರಕ್ಕಾಗಿ ಭಾರತೀಯ ಭಾಷೆಗಳ ತಾಂತ್ರಿಕ ಬಳಕೆಗಾಗಿ ಪ್ರಮುಖ ಮಾನದಂಡಗಳ ಅಭಿವೃದ್ಧಿ, ಭಾರತೀಯ ಭಾಷೆಗಳಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಓ.ಎಸ್.ಗಳಿಗೆ ಬದಲಾಗಿ ಬಹು–ಪದರವನ್ನು ಅಭಿವೃದ್ಧಿಪಡಿಸುವಿಕೆ, ಭಾರತೀಯ ಭಾಷೆಗಳಿಗೆ ವೆಬ್ ಪ್ರಮಾಣೀಕರಣ, ಭಾರತೀಯ ಭಾಷೆಗಳಲ್ಲಿ ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಿಕೆ, ಎ.ಆರ್. (ವರ್ಧಿತ ರಿಯಾಲಿಟಿ) ಆಧಾರಿತ ವೇದಿಕೆಗಳನ್ನು ಅಭಿವೃದ್ಧಿಪಡಿಸುವಿಕೆ, ಭಾರತೀಯ ಭಾಷೆಗಳನ್ನು ಎ.ಆರ್./ವಿ.ಆರ್. (ವರ್ಚುವಲ್ ರಿಯಾಲಿಟಿ)/ಎಮ್.ವಿ.ಆರ್. (ಮಿಕ್ಸ್ಡ ವರ್ಚುವಲ್ ರಿಯಾಲಿಟಿ)/ಸಿಮುಲೀಕರಣದೊಂದಿಗೆ ಸಂಯೋಜಿಸುವುದು / ಡಿಜಿಟಲ್ ಟ್ವಿನಿಂಗ್, ಇತ್ಯಾದಿಗಳ ಕಾರ್ಯನಿರ್ವಹಣೆ. ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನದ ನಿರಂತರ ಅಭಿವೃದ್ಧಿ ಮತ್ತು ಅದನ್ನು ಮುಖ್ಯವಾಹಿನಿಯ ಮೂಲಕ ಸಂಪನ್ಮೂಲಗಳನ್ನು ನಿಯೋಜಿಸುವ ಮತ್ತು ಸ್ಥಳೀಕರಿಸುವ ಮೂಲಕ ಈ ಕ್ಷೇತ್ರದಲ್ಲಿನ ಎಲ್ಲಾ ಪಾಲುದಾರರನ್ನು ಒಟ್ಟಿಗೆ ತರುವುದು ಇದರ ಮುಖ್ಯ ಉದ್ದೇಶ.

## ಭಾರತೀಯ ಭಾಷೆಗಳ ಮೂಲಕ ತಂತ್ರಜ್ಞಾನ

ಎನ್.ಇ.ಪಿ.–2020 ರಲ್ಲಿ ಸೂಚಿಸಿರುವಂತೆ ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು ಮತ್ತು ಇತರ ವೃತ್ತಿಪರ ಕೋರ್ಸುಗಳು ಸೇರಿದಂತೆ ಎಲ್ಲಾ ತಾಂತ್ರಿಕ ಶಿಕ್ಷಣವನ್ನು ಭಾರತೀಯ ಭಾಷಾ ಮಾಧ್ಯಮದ ಮೂಲಕ ನೀಡುವ ಉದ್ದೇಶ ಹೊಂದಿದೆ. ಇದರ ಜೊತೆಗೆ ವಿಷಯದ ವಸ್ತು ಮತ್ತು ಬೋಧನಾಕ್ರಮ ಅಭಿವೃದ್ಧಿ, ಸಂಪನ್ಮೂಲಗಳು (ಉದಾಹರಣೆಗೆ ಭಾರತೀಯ ಭಾಷೆಗಳಲ್ಲಿ ಡಿಜಿಟಲ್ ಪಠ್ಯಪುಸ್ತಕಗಳು, ಕಲಿಕೆ–ಬೋಧನಾ ಸಾಮಗ್ರಿಗಳು, ನಿಘಂಟುಗಳು ಮತ್ತು ಪದಕೋಶಗಳು) ಭಾರತೀಯ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡುವಿಕೆ, ಮೌಲ್ಯನಿರ್ಣಯ ಮತ್ತು ಮೌಲ್ಯಮಾಪನ, ಶಾಲೆಗಳು, ವೃತ್ತಿಪರ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ (ಐ.ಐ.ಟಿ.ಗಳು, ಎನ್.ಐ.ಟಿ.ಗಳು, ಐ.ಐ.ಐ.ಟಿ.ಗಳು, ಐ.ಐ.ಎಂ.ಗಳು, ಐ.ಐ.ಎಸ್.ಇ.ಆರ್.ಗಳು, ಇತ್ಯಾದಿ) ಭಾರತೀಯ ಭಾಷಾ ಮಾಧ್ಯಮದ ಮೂಲಕ ತಾಂತ್ರಿಕ ಶಿಕ್ಷಣದ ಜೊತೆಗೆ ಕೌಶಲ್ಯ ಕೋರ್ಸುಗಳನ್ನು ನಡೆಸುವುದು, ಮತ್ತು ಭಾರತೀಯ ಭಾಷೆಗಳನ್ನು ಬಳಸುವ ಕುರಿತು ಮುದ್ರಣ ಮತ್ತು ಸಾಮಾಜಿಕ ಮಾಧ್ಯಮಕ್ಕಾಗಿ ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಸಿದ್ಧಪಡಿಸುವಿಕೆ ಈ ಅಂಶದಡಿಯಲ್ಲಿ ಬರುವ ಪ್ರಮುಖ ಕ್ಷೇತ್ರಗಳಾಗಿವೆ.

## ಶೃಂಗಸಭೆಯ ಪ್ರಮುಖ ಅಂಶಗಳು

- ತಂತ್ರಜ್ಞಾನದ ಸಹಾಯದಿಂದ ಭಾರತೀಯ ಭಾಷೆಗಳ ಮೂಲಕ ಶಿಕ್ಷಣವನ್ನು ನೀಡುವ ಮಾರ್ಗಗಳನ್ನು ಅನ್ವೇಷಿಸುವಿಕೆ.
- ಭಾರತೀಯ ಭಾಷಾ ತಂತ್ರಜ್ಞಾನ ಪರಿಕರಗಳು ಅಗತ್ಯವಿರುವ ಎಲ್ಲಾ ಭಾರತೀಯ ಭಾಷೆಗಳ ಆದ್ಯತೆಯ ಕ್ಷೇತ್ರಗಳನ್ನು ಗುರುತಿಸುವುದು.
- ಭಾರತೀಯ ಭಾಷೆಗಳಲ್ಲಿ ಬೋಧನೆ, ತರಬೇತಿ, ಪರೀಕ್ಷೆ ಮತ್ತು ಶೈಕ್ಷಣಿಕ ವಿಷಯವನ್ನು ಅನುವಾದಿಸುವ ತಂತ್ರಜ್ಞಾನದ ಏಕೀಕರಣ.
- ಭಾರತೀಯ ಭಾಷಾ ಕ್ಷೇತ್ರ(ಡೊಮೇನ್)ದಲ್ಲಿ ಇತ್ತೀಚಿನ ತಾಂತ್ರಿಕ ಬೆಳವಣಿಗೆಗಳನ್ನು ಪ್ರದರ್ಶಿಸುವಿಕೆ. ಇದು ಭಾರತೀಯ ಸಂಕೇತ ಭಾಷೆ ಮತ್ತು ಬ್ರೈಲ್‌ಗೆ ತಂತ್ರಜ್ಞಾನ ಅಭಿವೃದ್ಧಿಪಡಿಸುವುದನ್ನು ಸಹ ಒಳಗೊಂಡಿರುತ್ತದೆ.
- ತಾಂತ್ರಿಕ ಮಧ್ಯಸ್ಥಿಕೆಗಳ ಮೂಲಕ ಎಲ್ಲಾ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರ (ಡೊಮೇನ್)ದಲ್ಲಿ ಭಾರತೀಯ ಭಾಷೆಗಳ ಪ್ರಚಾರ.
- ಭಾರತೀಯ ಭಾಷೆಗಳಿಗಾಗಿ, ಭಾಷೆಗಳಲ್ಲಿ ಮತ್ತು ಭಾಷೆಗಳ ಮೂಲಕ ತಂತ್ರಜ್ಞಾನ ಅಭಿವೃದ್ಧಿಯ ಪ್ರಸ್ತುತ ಸ್ಥಿತಿ ಮತ್ತು ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು.
- ಭಾರತೀಯ ಭಾಷೆಗಳಿಗಾಗಿ, ಭಾಷೆಗಳಲ್ಲಿ ಮತ್ತು ಭಾಷೆಗಳ ಮೂಲಕ ತಂತ್ರಜ್ಞಾನ, ಇದರ ಭವಿಷ್ಯದ ನಿರ್ದೇಶನಕ್ಕಾಗಿ ಮಾರ್ಗಗಳು ಮತ್ತು ವಿಧಾನಗಳು.

## ನಿರೀಕ್ಷಿತ ಫಲಿತಾಂಶ

ಈ ಶೃಂಗಸಭೆಯು ಭಾರತೀಯ ಭಾಷೆಗಳಿಗಾಗಿ, ಭಾಷೆಗಳಲ್ಲಿ ಮತ್ತು ಭಾಷೆಗಳ ಮೂಲಕ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬಳಕೆಯ ಕುರಿತು ಮಾರ್ಗಸೂಚಿಯನ್ನು ಸಿದ್ಧಪಡಿಸುತ್ತದೆ.

## ಭಾಗವಹಿಸುವಿಕೆ

ಈ ಶೃಂಗಸಭೆಯಲ್ಲಿ ಭಾಗವಹಿಸಲು ಶೈಕ್ಷಣಿಕ ಕ್ಷೇತ್ರದವರು, ಮುಂಚೂಣಿ ಉದ್ಯಮಿಗಳು, ಭಾಷಾ ತಜ್ಞರು, ಭಾಷಾಶಾಸ್ತ್ರಜ್ಞರು, ಎಜು–ಟೆಕ್/ಸ್ಟಾರ್ಟ್–ಅಪ್ ಕಂಪನಿಗಳು, ರಾಜ್ಯ ಸರ್ಕಾರಗಳು, ಭಾಷಾ ತಂತ್ರಜ್ಞಾನ ಸಂಶೋಧಕರು ಮತ್ತು ಅಭಿವೃದ್ಧಿಗಾರರು, ನೀತಿ ನಿರೂಪಕರನ್ನು ಈ ಸಮ್ಮೇಳನದಲ್ಲಿ ಭಾಗವಹಿಸುವಂತೆ ಆಹ್ವಾನಿಸಲಾಗಿದೆ.

## ನೋಂದಣಿ ಪ್ರಕ್ರಿಯೆ

**ಇಲ್ಲಿ ನೋಂದಾಯಿಸಿ:** https://technology-bharatiyabhasha.aicte-india.org/

ಈ ಶೃಂಗಸಭೆಯಲ್ಲಿ ಸೀಮಿತ ಸಂಖ್ಯೆಯ ಭಾಗಿಗಳನ್ನು ಆಹ್ವಾನಿಸಲಾಗುತ್ತದೆ.

ನೋಂದಾಯಿತರ ಭಾಗವಹಿಸುವಿಕೆಯನ್ನು ಮುಂದಿನ ದಿನಗಳಲ್ಲಿ ಖಾತರಿಪಡಿಸಲಾಗುವುದು.


**ಸಂಪರ್ಕ ವಿವರಗಳು:**

**ಪ್ರೊ. ಶೈಲೇಂದ್ರ ಮೋಹನ್**
**ನಿರ್ದೇಶಕರು**

**ಭಾರತೀಯ ಭಾಷಾ ಸಂಸ್ಥಾನ**
ಮಾನಸಗಂಗೋತ್ರಿ, ಹುಣಸೂರು ರಸ್ತೆ
ಮೈಸೂರು–570006, ಕರ್ನಾಟಕ, ಭಾರತ
**ದೂರವಾಣಿ ಸಂಖ್ಯೆ:** +91 821 2345000, +91 821 2345006
**ಫ್ಯಾಕ್ಸ್ ಸಂಖ್ಯೆ:** +91 821 2515032
**ಇಮೇಲ್:** director-ciil@gov.in